| Published Date: | 4 Aug 2017 | Publication: | Vijay Karnataka |
|---|---|---|---|
| Edition: | Bangalore | Page No: | 4 |

### ಟಿಎಸಿಎಸ್ ಆಯೋಜಿಸಿದ್ದ ಐಟಿ ವಿಜ್ ಸ್ಪರ್ಧೆ

# ಪಿಎಸ್‌ಬಿಬಿ-ಎಲ್‌ಎಲ್‌ಎ ಶಾಲಾ ತಂಡ ವಿಜಯಿ

**ವಿಕ ಸುದ್ದಿಲೋಕ ಬೆಂ**ಗಳೂರು

ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ಆಯೋಜಿಸಿದ್ದ 'ಐಟಿ ವಿಜ್-2017' ಮಾಹಿತಿ ತಂತ್ರಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ಪಿಎಸ್‌ಬಿಬಿ-ಎಲ್‌ಎಲ್‌ಎ ಶಾಲಾ ತಂಡ ವಿಜಯಿಯಾಗುವ ಮೂಲಕ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಯಿತು.

8 ರಿಂದ 12 ನೇ ತರಗತಿ ವಿದ್ಯಾರ್ಥಿಗಳಿಗಾಗಿ ನಡೆಯುವ ಈ ಸ್ಪರ್ಧೆಯಲ್ಲಿ ಸುಮಾರು 1,150 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಂತಿಮ ಹಂತಕ್ಕೆ ಆರು ಶಾಲಾ ತಂಡಗಳು ಆಯ್ಕೆಯಾಗಿದ್ದವು. ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ನಡೆದ ಅಂತಿಮ ಸ್ಪರ್ಧೆಯಲ್ಲಿ ಕೊನೆಗೆ ಪಿಎಸ್‌ಬಿಬಿ-ಎಲ್‌ಎಲ್‌ಎ ಶಾಲೆಯ ಆರ್ಯನ್ ಪಟೇಲ್ ಹಾಗೂ ಪ್ರಣವ್ ಪ್ರಭು ತಂಡ ಗೆಲವು ಪಡೆಯಿತು. ವಿಜೇತರಿಗೆ 60 ಸಾವಿರ ರೂ. ಮೌಲ್ಯದ ಗಿಫ್ಟ್ ವೋಚರ್ ಹಾಗೂ ಟ್ರೋಫಿಯನ್ನು ಬಹುಮಾನವಾಗಿ ನೀಡಲಾಯಿತು.

ಎನ್‌ಪಿಎಸ್ ಶಾಲೆಯ ಮುಕ್ತಾ ಜೋಶಿಪುರ ಮತ್ತು ರೋಹನ್ ಕಪೂರ್ ತಂಡ ರನ್ನರ್ ಅಪ್ ಪಡೆಯಿತು. ಈ ತಂಡಕ್ಕೆ 40 ಸಾವಿರ ರೂ. ಮೌಲ್ಯದ ಗಿಫ್ಟ್ ವೋಚರ್ ಬಹುಮಾನ ನೀಡಲಾಯಿತು. ಅಂತಿಮ ಸ್ಪರ್ಧೆಯಲ್ಲಿ ಪಾಲ್ಗೊಂಡ ಉಳಿದ ನಾಲ್ಕು ತಂಡಗಳ ವಿದ್ಯಾರ್ಥಿಗಳಿಗೆ ಜಿಮ್ ಬ್ಯಾಗ್, ಪೆನ್ ಡ್ರೈವ್, ಇಯರ್ ಫೋನ್ ಹೊಂದಿರುವ ಕಿಟ್‌ಗಳನ್ನು ಬಹುಮಾನವಾಗಿ ವಿತರಿಸಲಾಯಿತು. ಹೊಸದಿಲ್ಲಿ, ಅಹಮದಾಬಾದ್, ಭುವನೇಶ್ವರ, ಇಂದೋರ್, ಕೊಚ್ಚಿ, ಮುಂಬೈ ಸೇರಿದಂತೆ ಒಟ್ಟು 12 ನಗರಗಳಲ್ಲಿ ಈ ಸ್ಪರ್ಧೆ ನಡೆದಿದೆ.

ಬಿಬಿಎಂಪಿ ಮಾಜಿ ಆಯುಕ್ತ ಕೆ.ಜೈರಾಜ್, ಎಡಿಜಿಪಿ ಭಾಸ್ಕರ್ ರಾವ್, ಟಿಸಿಎಸ್ ಬೆಂಗಳೂರು ಮುಖ್ಯಸ್ಥ ನಾಗರಾಜ ಇಜಾರಿ ಹಾಜರಿದ್ದರು. ಕ್ವಿಜ್ ಮಾಸ್ಟರ್ ಬಾಲಸುಬ್ರಹ್ಮಣ್ಯನ್ ಸ್ಪರ್ಧೆ ನಡೆಸಿಕೊಟ್ಟರು.



ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಆಯೋಜಿಸಿದ್ದ 'ಐಟಿ ವಿಜ್-2017' ಮಾಹಿತಿ ತಂತ್ರಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ಗೆಲವು ಪಡೆದ ಪಿಎಸ್‌ಬಿಬಿ-ಎಲ್‌ಎಲ್‌ಎ ಶಾಲೆಯ ವಿದ್ಯಾರ್ಥಿಗಳಾದ ಆರ್ಯನ್ ಪಟೇಲ್ ಹಾಗೂ ಪ್ರಣವ್ ಪ್ರಭು.

### ಟ್ವೀಟ್ ಸ್ಪರ್ಧೆ

ಸಭಾಂಗಣದಲ್ಲಿದ್ದ ಇತರೆ ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಸ್ಪರ್ಧೆಗೆ ಸಂಬಂಧಿಸಿದ ಟ್ವೀಟ್‌ಗಳನ್ನು ಮಾಡುವ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳು ಒಟ್ಟು 8,105 ಟ್ವೀಟ್‌ಗಳನ್ನು ಮಾಡಿದ್ದು, ಹೆಚ್ಚು ಟ್ವೀಟ್ ಮಾಡಿದ ಹಾಗೂ ಉತ್ತಮ ಟ್ವೀಟ್ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.

ಭುವನೇಶ್ವರ, ಇಂದೋರ್, ಕೊಚ್ಚಿ, ಮುಂಬೈ ಸೇರಿದಂತೆ ಒಟ್ಟು 12 ನಗರಗಳಲ್ಲಿ ಈ ಸ್ಪರ್ಧೆ ನಡೆದಿದೆ.

ಬಿಬಿಎಂಪಿ ಮಾಜಿ ಆಯುಕ್ತ ಕೆ.ಜೈರಾಜ್, ಎಡಿಜಿಪಿ ಭಾಸ್ಕರ್ ರಾವ್, ಟಿಸಿಎಸ್ ಬೆಂಗಳೂರು ಮುಖ್ಯಸ್ಥ ನಾಗರಾಜ ಇಜಾರಿ ಹಾಜರಿದ್ದರು. ಕ್ವಿಜ್ ಮಾಸ್ಟರ್ ಬಾಲಸುಬ್ರಹ್ಮಣ್ಯನ್ ಸ್ಪರ್ಧೆ ನಡೆಸಿಕೊಟ್ಟರು.

ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳು ಒಟ್ಟು 8,105 ಟ್ವೀಟ್‌ಗಳನ್ನು ಮಾಡಿದ್ದು, ಹೆಚ್ಚು ಟ್ವೀಟ್ ಮಾಡಿದ ಹಾಗೂ ಉತ್ತಮ ಟ್ವೀಟ್ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.